1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

LAC-84/2021

RW- 01

ಪ್ರ. ಬೋ. ದಿನಾಂಕಃ 22-02-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಕಟ್ಟೆಹಳ್ಳೇರ ನಾಗೇಂದ್ರಪ್ಪ |
| ತಂದೆ/ಗಂಡನ ಹೆಸರು | : | ರುದ್ರಪ್ಪ |
| ವಯಸ್ಸು | : | 72 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಹುಣಸೆಕಟ್ಟೆ ಗ್ರಾಮ, ದಾವಣಗೆರೆ ತಾ. |

ಈ ದಿನ ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿರುವ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದಾಗಿರುತ್ತದೆ

ಮುಂದುವರೆದ ಮುಖ್ಯ ವಿಚಾರಣೆಃ- 2 ನೇ ಎದುರುದಾರರ ಪರ ಶ್ರೀ ಕೆ ಬಿ ಎಸ್ ವಕೀಲರಿಂದ.

ಅಸಲು ದಾವಾ ಸಂಖ್ಯೆ19/17 ರಲ್ಲಿ ಆಗಿರುವ ಆದೇಶದ ಪ್ರತಿ , ಮತ್ತು ಡಿಕ್ರಿ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ನಿಆರ್.1 ಮತ್ತು 2 ಎಂದು ಗುರುತಿಸಲಾಯಿತು. ಆರ್ ಎ .14/14 ರ ಅಂತಿಮ ತೀರ್ಪಿನ ಆದೇಶ ಮತ್ತು ಡಿಕ್ರಿ ಕಾಪಿ ಹಾಜರುಪಡಿಸಿದ್ದು, ಅವುಗಳನ್ನು ನಿಆರ್.3 ಮತ್ತು 4 ಎಂದು ಗುರುತಿಸಲಾಯಿತು. ಆರ್ ಎಸ್ ಎ.865/23 ರ ಇಂಟರ್ ನೆಟ್ ಕಾಪಿಗಳನ್ನು ಹಾಜರುಪಡಿಸಿರುತ್ತೇನೆ.

ಪಾಟೀಸವಾಲುಃ- 1 ನೇ ಪ್ರತಿವಾದಿ ಪರವಾಗಿ ಶ್ರೀ ಎ.ಎಂ.ಹೆಚ್ ವಕೀಲರಿಂದ.

1 ನೇ ಪ್ರತಿವದಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

ಪಾಟೀಸವಾಲುಃ- ಅರ್ಜಿದಾರರಪರ ವಕೀಲರಿಂದ.

ಡಿಜಿಪಿ ರವರನ್ನು ಕರೆಸಲಾಗಿ ಗೈರುಹಾಜರು, ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ಆರ್ ಡಬ್ಲ್ಯೂ.01

ಇಂದು ದಿ.10-11-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಕರಿಸಲಾಯಿತು.

ಪಾಟೀಸವಾಲುಃ 2 ರಿಂದ 4 ನೇ ಎದುರುದಾರರ ಪರ ಶ್ರೀ ಎನ್ ಆರ್ ವಕೀಲರಿಂದ.

ಅಸಲುದಾವೆ ನಂ.191/18 ರಲ್ಲಿ ಪಾಲುವಿಭಾಗಕ್ಕೆ ಸಲ್ಲಿಸಲಾಗಿತ್ತು ಎನ್ನುವುದು ಸರಿ. ಸದರಿ ದಾವೆಯಲ್ಲಾದ ಆದೇಶವನ್ನು ಪ್ರಶ್ನಿಸಿ ಆರ್.ಎ.52/23 ರಂತೆ ಅಪೀಲು ಸಲ್ಲಿಸಲಾಗಿದೆ ಎನ್ನುವುದು ಸರಿ. ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೆ ಎನ್ನುವುದು ಸರಿ. ಸದರಿ ಅಪೀಲು ಇನ್ನು ವಿಲೆಗೆ ಇದೆ ಎನ್ನುವುದು ಸರಿ. ಯಾರು ಯಾರಿಗೆ ಎಷ್ಟು ಹಿಸ್ಸೆ ಬರುತ್ತದೆ ಎನ್ನುವ ಬಗ್ಗೆ ತೀರ್ಮಾನ ಆಗಿಲ್ಲ ಎಂದರೆ ಎಲ್ಲಾ ಆಸ್ತಿ ನಮ್ಮ ಭಾಗಕ್ಕೆ ಬಂದಿರುವ ಆಸ್ತಿ ಎಂದು ನುಡಿದಿದ್ದಾರೆ. ನಮ್ಮ ಭಾಗಕ್ಕೆ ಬಂದಿದೆ ಎಯಿ ಹೇಳುವ ಆಸ್ತಿಯಲ್ಲಿ ಭಾಗ ಬೇಕು ಎಂದು ದಾವೆ ಸಲ್ಲಿಸಿದ್ದರು ಎನ್ನುವುದು ಸರಿ. ಅಪೀಲಿನಲ್ಲಿ ಭಾಗದ ಬಗ್ಗ ತೀರ್ಮಾನ ಆಗಿಲ್ಲ ಎನ್ನುವುದು ಸರಿ. ಆದರೆ ದಾವೆಯಲ್ಲಿ ತೀರ್ಮಾನವಾಗಿರುತ್ತದೆ. ದಾವಾದಲ್ಲಿ ಸರಿಯಾಗಿ ತೀರ್ಮಾನವಾಗಿಲ್ಲ ಎಂದು ಅಪೀಲು ಸಲ್ಲಿಸಲಾಗಿದೆ ಎನ್ನುವುದು ಸರಿ. ನ್ಯಾಯಾಲಯದಲ್ಲಿ ಜಮಾ ಮಾಡಿರುವ ಪರಿಹಾರದ ಮೊತ್ತದಲ್ಲಿ ನಮಗೆಯಾವುದೇ ಭಾಗ ಇಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.